**C.Misc 39/17**
**ಆರ್. ಡಬ್ಲೂ-1**

**ದಿನಾಂಕಃ 29.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :- ಅರ್ಜಿದಾರರ ಪರ ವಕೀಲರಿಂದಃ-**

ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡಿರುವುದಿಲ್ಲ. ಸದರಿ ಪ್ರಮಾಣ ಪತ್ರವನ್ನು ತಯಾರಿಸಲು ನಾನು ನನ್ನ ವಕೀಲರಿಗೆ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿ. ನಾನು ಮೂಲತಃ ಬೋಗೇಶ್ವರ ಕಾಲೋನಿಯಲ್ಲಿ ಹುಟ್ಟಿ ಬೆಳೆದಿರುತ್ತೇನೆ. ಹೊನ್ನಮ್ಮನ ಕಟ್ಟೆಯಲ್ಲಿ ನನ್ನ ತಂದೆಯ ಹಿರಿಯ ಹೆಂಡತಿ ಮಕ್ಕಳು ಇರುತ್ತಾರೆ. ನನ್ನ ತಂದೆಗೆ ನಾನು 4 ನೇ ಮಗ ಎಂದರೆ ಸರಿ. ಅರ್ಜಿದಾರರು ಏನು ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ ಎಂದು ಗೊತ್ತಿಲ್ಲ. ನಾನು ಅರ್ಜಿದಾರರ ತಾಯಿಯ ಸೋದರ ಮಾವನ ಮಗ ಎಂದರೆ ಸರಿಯಲ್ಲ. ನನ್ನ ಅಜ್ಜಿ ಮತ್ತು ಅವರ ಕುಟುಂಬದವರು ಹಾಗೂ ನಾನು ಹೊನ್ನಮ್ಮನಕಟ್ಟೆಯಲ್ಲಿ ವಾಸ ಇದ್ದೆವು ಎಂದರೆ ಸರಿಯಲ್ಲ. ನಾನು ಮತ್ತು ಅರ್ಜಿದಾರರು ಹೊನ್ನಮ್ಮನಕಟ್ಟೆಯಲ್ಲಿ ಇದ್ದಾಗ ಪರಸ್ಪರ ಪ್ರೀತಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಇಬ್ಬರ ಮನೆಯಿಂದ ದಿಃ27.04.2008 ರಂದು ಕೆಂಡಗಣ್ಣಸ್ವಾಮಿ ದೇವಸ್ಥಾನ ಗದ್ದಿಗೆಯಲ್ಲಿ ಮದುವೆ ಆಗಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಪೋಟೋ ತೆಗೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮದುವೆಯಾದ ನಂತರ ಅರ್ಜಿದಾರರನ್ನು ಚಿಕ್ಕಕೆರೆಯೂರು ಗ್ರಾಮಕ್ಕೆ ಕರೆದುಕೊಂಡು ಹೋಗಿ 1 ½ ವರ್ಷಗಳ ಕಾಲ ಸಂಸಾರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಿಕ್ಕಕೆರೆಯೂರು ಮತ್ತು ಬೋಗೇಶ್ವರ ಕಾಲೋನಿ ಅಕ್ಕ ಪಕ್ಕ ಇರುತ್ತವೆ ಎಂದರೆ ಸರಿ. ಬೋಗೇಶ್ವರ ಕಾಲೋನಿಯಲ್ಲಿ ನಾನು ಅರ್ಜಿದಾರರು ಮತ್ತು ನನ್ನ ಅಕ್ಕ ವಾಸ ಇರುತ್ತೇವೆ ಎಂದರೆ ಸರಿಯಲ್ಲ. ಮನೆಯವರ ವಿರೋಧದಿಂದ ಮದುವೆ ಆಗಿರುವುದರಿಂದ ನನ್ನ ಅಕ್ಕ ಮಂಗಳ ಅರ್ಜಿದಾರರಿಗೆ ಕಿರುಕುಳ ಕೊಡುತ್ತಿದ್ದರು ಎಂದರೆ ಸರಿಯಲ್ಲ, ಅದೇ ರೀತಿ ನಾನು ಸಹ ನನ್ನ ಅಕ್ಕನ ಜೊತೆ ಸೇರಿಕೊಂಡು ಕಿರುಕುಳ ಕೊಡುತ್ತಿದ್ದೆ ಎಂದರೆ ಸರಿಯಲ್ಲ.

ನನ್ನ ಮತ್ತು ಅರ್ಜಿದಾರರ ವೈವಾಹಿಕ ಜೀವನದಿಂದ 2 ನೇ ಅರ್ಜಿದಾರರು ಜನಿಸಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಅರ್ಜಿದಾರರು ಹೆಣ್ಣು ಮಗು ಆಗಿರುವುದರಿಂದ ನಾನು ಮತ್ತು ನನ್ನ ಅಕ್ಕ ಅರ್ಜಿದಾರರನ್ನು ಮನೆಯಿಂದ ಹೊರಗಡೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 25 ವರ್ಷಗಳಿಂದ ಹುಣಸೂರಿನಲ್ಲಿ ವಾಸ ಇರುತ್ತೇನೆ ಎಂದು ನುಡಿಯುತ್ತಾರೆ. ನಾನು ಹುಣಸೂರಿನಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಹುಣಸೂರಿನಲ್ಲಿ ವಾಸ ಇರುತ್ತೇನೆ ಎಂದು ಬರೆಸಿದ್ದೀರಾ ಎಂದರೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬೋಗೇಶ್ವರ ಕಾಲೋನಿಯಲ್ಲಿ ವಾಸ ಇರುತ್ತೇನೆ ಎಂದು ಬರೆಸಿದ್ದೇನೆ ಎಂದರೆ ಅದು ನನ್ನ ಹುಟ್ಟೂರು ಅದಕ್ಕೆ ಬರೆಸಿರುತ್ತೇನೆ ಎಂದು ಹೇಳುತ್ತಾರೆ. ನಾನು ಹುಣಸೂರಿನ ನ್ಯಾಯಾಲಯದ ಮುಂಭಾಗ ಹೋಟೆಲ್ ಇಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ, ಮುಂದುವರೆದು ಹೋಟೆಲ್ ನಲ್ಲಿ Supplier ಆಗಿ ಕೆಲಸ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಹೋಟೆಲ್ ಶಾಂತ ಎಂಬುವವರಿಗೆ ಸೇರಿರುತ್ತದೆ.

ಶಾಂತ ರವರ ಗಂಡನ ಹೆಸರು ಗೊತ್ತಿಲ್ಲ. ಶಾಂತ ರವರು ಮೂಲತಃ ದರ್ಗಾದವರು ಎಂದರೆ ಗೊತ್ತಿಲ್ಲ. ನಾನು ಸದರಿ ಶಾಂತ ರವರ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡು ಹೋಟೆಲ್ ನಡೆಸುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೇ ಸದರಿ ಹೋಟೆಲ್ ನ ಮಾಲೀಕನಾಗಿದ್ದು ಶಾಂತ ಎಂಬುವವರನ್ನು ಜೊತೆಯಲ್ಲಿ ಇರಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಶಾಂತ ರವರ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡು ಅರ್ಜಿದಾರರಿಗೆ ಕಿರುಕುಳ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಮಧ್ಯಪಾನ ಚಟ್ಟಕ್ಕೆ ಒಳಗಾಗಿ ಅರ್ಜಿದಾರರಿಗೆ ದೈಹಿಕವಾಗಿ ಕಿರುಕುಳ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಅರ್ಜಿದಾರರು ಹೆಚ್ ಡಿ ಕೋಟೆ ಮಹಿಳಾ ಸಾಂತ್ವಾನ ಕೇಂದ್ರಕ್ಕೆ ದೂರು ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಸಾಂತ್ವಾನ ಕೇಂದ್ರದಿಂದ ನೋಟಿಸ್ ಕೊಟ್ಟರು ನಾನು ಹೋಗಿರುವುದಿಲ್ಲ ಎಂದರೆ ನೋಟಿಸ್ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ದಿಃ01.03.2021 ರಂದು ನೋಟಿಸ್ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಾಂತ್ವಾನ ಕೇಂದ್ರದ ನೋಟಿಸ್ ಗೆ ಸ್ಪಂದಿಸಿದ ಕಾರಣ ಅರ್ಜಿದಾರರು ಸದರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರು ನನ್ನ ಹೆಂಡತಿ ಮತ್ತು ಮಗಳು ಅಲ್ಲ ಎಂದು ಮತ್ತು ಸುಳ್ಳು ಅರ್ಜಿ ಸಲ್ಲಿಸಿರುತ್ತಾರೆ ಎಂದು ಅರ್ಜಿದಾರರ ವಿರುದ್ಧ ನಾನು ಯಾವುದೇ ಕ್ರಮ ಕೈಗೊಂಡಿಲ್ಲ.

**<u>ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**